ಆ) ಉದ್ಭವಿಸುವುದಿಲ್ಲ

ಇ) ಶ್ರೀ ಎಂ.ಟಿ.ಕೃಷ್ಣಪ್ಪ ರವರ ಬಾಬ್ತು ಮಂಡ್ಯ ಗ್ರಾಮದ ಸರ್ವೆ ನಂ.೧೪೭ ರಲ್ಲಿ ನಿವೇಶನ ಸಂಖ್ಯೆ: ೧೭, ೧೮ ಮತ್ತು ೨೧ಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳದೇ ಖಾತಾ ಮಾಡಲು ಸೂಚಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಸತಿನಿಲಯಗಳು.

2403(3135)

ಶ್ರೀ ಆತ್ಮಾನಂದ.ಎಂ.ಎಸ್.(ಮಂಡ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಇರುವ ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ವಸತಿನಿಲಯಗಳ ಸಂಖ್ಯೆ ಎಷ್ಟು?(ತಾಲ್ಲೂಕುವಾರು ವಿವರ ನೀಡುವುದು)

ಆ) ಮಂಡ್ಯ ತಾಲ್ಲೂಕಿನ ಜನಸಂಖ್ಯೆಗೆ ಅನುಗುಣವಾಗಿ ವಸತಿನಿಲಯಗಳು ಇವೆಯೇ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಮಂಡ್ಯ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ವಸತಿ ನಿಲಯಗಳಿರುವುದಿಲ್ಲ. ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳ ವಿವರಗಳನ್ನು ಅನಬಂಧದಲ್ಲಿ ನೀಡಿದೆ.

ಆ) ಅರ್ಹ ವಿದ್ಯಾರ್ಥಿಗಳ ಲಭ್ಯತೆ ಹಾಗೂ ಪ್ರತಿ ವರ್ಷವೂ ಆಯವ್ಯಯದಲ್ಲಿ ಒದಗಿಸಲಾಗುವ ಹಣದ ಲಭ್ಯತೆಗೆ ಅನುಗುಣವಾಗಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ANNEXURE

Taluk-wise details of Scheduled Caste/Backward Classes hostels in Mandya District.

Sl. No.	Taluk	Scheduled Caste hostels	Backward Class hostels
1.	Mandya	10	13
2.	Maddur	8	11
3.	Srirangapatna	5	7
4.	K.R.Pet	6	5
5.	Nagamangla	5	6
6.	Malavalli	14	9
7.	Pandavapura	4	5
	Total	52	56